ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

| ಇವರಿಂದ | | ಇವರಿಗೆ |
|---|---|---|
| ಉಪ್ರವ್ಯ (ಹ) | ಅಂತರ ಕಛೇರಿ ಟಿಪ್ಪಣಿ | ಪ್ರವ್ಯ (ಆ&ಭೂ) |

ಸಂಖ್ಯೆ: ಹಣಕಾಸು/ಮಾ.ಹ–2005/2013 ದಿನಾಂಕ:22–06–2013

ವಿಷಯ: ಮಾಹಿತಿ ಹಕ್ಕು ಅಧಿನಿಯಮ 2005ರಲ್ಲಿಡಿಯಲ್ಲಿ ಮಾಹಿತಿಯನ್ನು ಅಂತರ್ಜಾಲದಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ:–1.ಸುತ್ತೋಲೆ ಸಂಖ್ಯೆ:ಆಡಳಿತ/ಸಿಬ್ಬಂದಿ(2)/ಮಾಹ/2012, ದಿ.15–04–13.
2.ನೆನಪೋಲೆ ಸಂಖ್ಯೆ:ಆಡಳಿತ/ಸಿಬ್ಬಂದಿ(2)/ಮಾಹ/2012, ದಿ.23–05–13.
3.ನೆನಪೋಲೆ ಸಂಖ್ಯೆ:ಆಡಳಿತ/ಸಿಬ್ಬಂದಿ(2)/ಮಾಹ/2012, ದಿ.10–06–13.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾಹಿತಿ ಹಕ್ಕು ಅಧಿನಿಯಮ 2005ರಲ್ಲಿಡಿಯಲ್ಲಿ ನಿಗಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅಂತರ್ಜಾಲದಲ್ಲಿ ಅಳವಡಿಸಲು ಹಣಕಾಸು ವಿಭಾಗಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗುತ್ತಿದೆ.

ಉಪ ಪ್ರಧಾನ ವ್ಯವಸ್ಥಾಪಕರು(ಹ)

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
KSSIDC
24 JUN 2013
ಬೆಂಗಳೂರು-560 010
ಸಂಖ್ಯೆ......1098..........

D:cacom-1:MRR: Right to information action-13

ಹಣಕಾಸು ವಿಭಾಗ ಕೇಂದ್ರ ಕಛೇರಿ

**ಮಾಹಿತಿ ಹಕ್ಕು ಅಧಿನಿಯಮ 2005 ವಿಧಿ 4(1) (ಎ) ಮತ್ತು 4(1) (ಬಿ) ಪ್ರಕಾರ ಹಣಕಾಸು ವಿಭಾಗಕ್ಕೆ ಸಂಬಂಧಿಸಿದಂತೆ, ಈ ಕೆಳಗಿನಂತೆ ಮಾಹಿತಿ ನೀಡಲಾಗಿದೆ:**

**ವಿಧಿ 4(1)(ಎ):**

**ಈ ಅಧಿನಿಯಮದ ಅಡಿಯಲ್ಲಿ ಮಾಹಿತಿ ಹಕ್ಕಿಗಾಗಿ ಅನುಕೂಲ ಮಾಡಿಕೊಡುವ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಕ್ರಮಬದ್ದ ಸೂಚಿಪಟ್ಟಿ ಮತ್ತು ಸೂಚೀಕರಣಗೊಂಡ ಅದರ ಎಲ್ಲಾ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಸೂಕ್ತ ಸಮಯದೊಳಗಾಗಿ ಮತ್ತು ಸಂಪನ್ಮೂಲಗಳ ಲಭ್ಯತೆಗೊಳಪಟ್ಟು, ಗಣಕೀಕರಣಕ್ಕೆ ಸೂಕ್ತವಾದ ಎಲ್ಲ ದಾಖಲೆಗಳನ್ನು ಗಣಕೀಕರಿಸುವಂತೆ ಮತ್ತು ಅಂತಹ ದಾಖಲೆಗಳು ಸುಲಭವಾಗಿ ದೊರೆಯುವಂತೆ ದೇಶಾದ್ಯಂತ ವಿವಿಧ ಸಿಸ್ಟಂಗಳಲ್ಲಿ ಸಂಪರ್ಕಜಾಲದ ಮೂಲಕ ಸಂಪರ್ಕ ಕಲ್ಪಿಸುವಂತೆ ಮಾಡತಕ್ಕದ್ದು ಎಂದು ಸೂಚಿಸಿದೆ.**

*ನಿಗಮದ ಎಲ್ಲಾ ಶಾಖೆಗಳೊಂದಿಗೆ ಸಂಪರ್ಕಜಾಲ ಏರ್ಪಡಿಸದ ಹೊರತು ಸದರಿ ಅದಿನಿಯಮದಡಿಯಲ್ಲಿ ಸೂಚಿಸಿರುವಂತೆ ನಿರ್ವಹಿಸಲು ಕಷ್ಟಸಾಧ್ಯ ಆದುದರಿಂದ ಈಗಾಗಲೆ ಕೋರಿರುವಂತೆ ಆದಷ್ಟು ಬೇಗನೆ ನಿಗಮದ ಎಲ್ಲಾ ಶಾಖೆಗಳ ವಹಿವಾಟುಗಳನ್ನು ಕೇಂದ್ರ ಕಛೇರಿಯೊಂದಿಗೆ ಸಂಪರ್ಕಜಾಲ ಏರ್ಪಡಿಸಲು ಮತ್ತೊಮ್ಮೆ ಕೋರಲಾಗಿದ್ದು, ವಿಷಯದ ಕುರಿತು ಆದ್ಯತೆ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕಿದೆ.*

**ವಿಧಿ 4 (1)(ಬಿ):**

**(1) ಹಣಕಾಸು ವಿಭಾಗದ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳನ್ನು**

*ಹಣಕಾಸು ವಿಭಾಗದಲ್ಲಿ ಈ ಕೆಳಕಂಡಂತೆ ಎರಡು ಉಪ ವಿಭಾಗಗಳಿರುತ್ತದೆ. ಇವುಗಳ ರಚನೆ **ಅನುಬಂಧ–1** ರಲ್ಲಿ ವಿವರಿಸಲಾಗಿದೆ.*

*(ಎ) ವಾಣಿಜ್ಯ ಲೆಕ್ಕ ವಿಭಾಗ*

*(ಬಿ) ಕೈಗಾರಿಕಾ ವಸಾಹತು ಹಾಗು ಕಾಮಗಾರಿ ಲೆಕ್ಕ ವಿಭಾಗ*

**ಈ ಎರಡು ಉಪವಿಭಾಗಗಳ ರಚನೆ ಕಾರ್ಯಗಳು ಹಾಗು ಕರ್ತವ್ಯಗಳು ಈ ಕೆಳಕಂಡಿರುತ್ತದೆ.**

**I. ವಾಣಿಜ್ಯ ಲೆಕ್ಕ ವಿಭಾಗ:**

1. *ನಿಗಮದ ಸಂಪೂರ್ಣ ಹಣಕಾಸು ವ್ಯವಹಾರದ ನಿರ್ವಹಣೆ.*
2. *ಕೈಗಾರಿಕಾ ಕಚ್ಚಾ ಸಾಮಗ್ರಿಗಳ ಖರೀದಿಯ ಸಲುವಾಗಿ ಸರಬರಾಜುದಾರರಿಗೆ ಹಣ ಪಾವತಿಯ ವ್ಯವಸ್ಥೆ.*

3. ಕೈಗಾರಿಕಾ ಕಚ್ಚಾ ಸಾಮಗ್ರಿಗಳ ಖರೀದಿಯ ಸರಕು ಪಟ್ಟಿಗಳನ್ನು ಲೆಕ್ಕಚಾರ ಮಾಡಿ ನಿಗಮದ ಲೆಕ್ಕಕ್ಕೆ ತೆಗೆದುಕೊಳ್ಳುವುದು ಮತ್ತು ಅವರ ಲೆಡ್ಜರ್ ಖಾತೆಗಳನ್ನು ನಿರ್ವಹಿಸುವುದು.
4. ನಿಗಮದ 24 ಡಿಪೋಗಳ ಮೂಲಕ ಮಾರಾಟ ಮಾಡಿದ ಕೈಗಾರಿಕಾ ಕಚ್ಚಾ ಸಾಮಗ್ರಿಗಳ ಸರಕು ಪಟ್ಟಿಗಳನ್ನು ಲೆಕ್ಕ ಮಾಡಿಕೊಳ್ಳುವುದು ಮತ್ತು ಎಲ್ಲಾ ಗ್ರಾಹಕರ ಲೆಡ್ಜರ್ ಖಾತೆಗಳನ್ನು ನಿರ್ವಹಿಸುವುದು.
5. ನಿಗಮದ ಎಲ್ಲಾ ಆಡಳಿತಾತ್ಮಕ ಖರೀದಿಗಳ ಬಿಲ್ಲುಗಳನ್ನು ಲೆಕ್ಕ ಮಾಡಿಕೊಂಡು ಸರಬರಾಜುದಾರರಿಗೆ ಪಾವತಿ ಮಾಡುವುದು.
6. ನಿಗಮದ ಎಲ್ಲಾ ನೌಕರರ ಮಾಸಿಕ ವೇತನ, ಭತ್ಯೆಗಳನ್ನು ಲೆಕ್ಕ ಹಾಕಿ ಪ್ರತಿ ತಿಂಗಳು ವೇತನವನ್ನು ಪಾವತಿಸುವುದು.
7. ನೌಕರರ ವೇತನದಿಂದ ಕಟಾಯಿಸಿದ ಆದಾಯ ತೆರಿಗೆ, ಭವಿಷ್ಯನಿಧಿ, ಜೀವ ವಿಮೆ, ವೃತ್ತಿ ತೆರಿಗೆ, ಇತ್ಯಾದಿ ಮೊಬಲಗುಗಳನ್ನು ಸಂಬಂಧಪಟ್ಟ ಶಾಸನ ಬದ್ಧ ಸಂಸ್ಥೆಗಳಿಗೆ ಕಾಲಕಾಲಕ್ಕೆ ಪಾವತಿಸುವುದು.
8. ಸರಬರಾಜುದಾರರು ಮತ್ತು ಗುತ್ತಿಗೆದಾರರಿಂದ ಕಟಾಯಿಸಿದ ಶಾಸನ ಬದ್ಧ ತೆರಿಗೆಗಳನ್ನು ಕಾಲಕಾಲಕ್ಕೆ ಸಂಬಂಧಿಸಿದ ಇಲಾಖೆಗೆ ಪಾವತಿಸುವುದು.
9. ನಿಗಮದ ಎಲ್ಲಾ ಶಾಖೆಗಳ ಸಾದಿಲ್ವಾರು ಖರ್ಚುಗಳನ್ನು ಹಿಂಭರಿಸುವುದು.
10. ನಿಗಮದ ವಾರ್ಷಿಕ ಮುಂಗಡ ಪತ್ರವನ್ನು ತಯಾರಿಸುವುದು.
11. ನಿಗಮದ ವಾರ್ಷಿಕ ಆಯವ್ಯಯ ಪತ್ರ ಮತ್ತು ಲಾಭ ಮತ್ತು ನಷ್ಟಗಳ ವಿವರಣ ಪತ್ರ ಹಾಗೂ ಅವುಗಳ ಉಪಬಂಧಗಳನ್ನು ತಯಾರಿಸಿ ವಾರ್ಷಿಕ ಸಾಮಾನ್ಯ ಸಭೆಯ ಅನುಮತಿಗೆ ಪ್ರಸ್ತಾವನೆ ಸಲ್ಲಿಸುವುದು.
12. ಸರ್ಕಾರ ಹಾಗೂ ಇನ್ನಿತರ ಸಂಸ್ಥೆಗಳೂ ಕೇಳುವ ಹಣಕಾಸು ಮಾಹಿತಿಗಳನ್ನು ತಯಾರಿಸಿ ಒಪ್ಪಿಸುವುದು.
13. ನಿಗಮದ ಪ್ರಧಾನ ಕಛೇರಿಯ ಬ್ಯಾಂಕ್ ಖಾತೆಗಳ ವ್ಯವಹಾರ ಹಾಗೂ ಹೆಚ್ಚುವರಿ ಹಣವನ್ನು ಸಾವಧಿ ಠೇವಣಿಗಳಲ್ಲಿ ತೊಡಗಿಸುವ ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸ ಕಾರ್ಯಗಳ ನಿರ್ವಹಣೆ.

## II. ವಸಾಹತು ಮತ್ತು ಕಾಮಗಾರಿ ವಿಭಾಗ:

1. ನಿಗಮದ ಎಲ್ಲಾ ಕೈಗಾರಿಕಾ ವಸಾಹತುಗಳಲ್ಲಿ ಹಂಚಿಕೆಯಾದ ಮಳಿಗೆ ಮತ್ತು ನಿವೇಶನಗಳ ಹಂಚಿಕೆದಾರರ ಲೆಡ್ಜರ್ ಖಾತೆಗಳನ್ನು ನಿರ್ವಹಿಸುವುದು.
2. ಹಂಚಿಕೆದಾರರಿಂದ ವಸೂಲಿಯಾದ ಬಾಡಿಗೆ, ಕಂತು, ನೀರಿನ/ಸೇವಾ ತೆರಿಗೆ ಇತ್ಯಾದಿ ಮೊಬಲಗುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದು.
3. ಕ್ರಯ ಪತ್ರ ನೀಡಲಾದ ಮಳಿಗೆ/ನಿವೇಶನಗಳ ಮಾರಾಟವನ್ನು ಲೆಕ್ಕಾಚಾರ ಮಾಡುವುದು.
4. ಕ್ರಯ ಪತ್ರ ನೀಡುವ ಮೊದಲು ಹಂಚಿಕೆದಾರರ ಖಾತೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ ಅವರಿಂದ ಬರಬೇಕಾದ ಬಾಕಿಗಳ ಬಗ್ಗೆ ಶಾಖಾ ಕಛೇರಿಗಳಿಗೆ ಮಾಹಿತಿ ನೀಡುವುದು.
5. ಕೈಗಾರಿಕಾ ವಸಾಹತು ಆಸ್ತಿಗಳನ್ನು ಮತ್ತು ಸವಕಳಿಯನ್ನು ಲೆಕ್ಕಾಚಾರ ಮಾಡಿ ವಾರ್ಷಿಕ ಲೆಕ್ಕ ಪತ್ರಗಳಲ್ಲಿ ಅಳವಡಿಸಲು ವಾಣಿಜ್ಯ ಲೆಕ್ಕ ವಿಭಾಗಕ್ಕೆ ನೀಡುವುದು.
6. ಸರ್ಕಾರದಿಂದ ನಿಗಮಕ್ಕೆ ಬರಬೇಕಾದ ಅನುದಾನ/ ಸಹಾಯಧನ ಇತ್ಯಾದಿಗಳನ್ನು ಲೆಕ್ಕಾಚಾರ ಮಾಡಿಕೊಳ್ಳುವುದು.
7. ಕೈಗಾರಿಕಾ ವಸಾಹತು ಚಟುವಟಿಕೆಗಳಿಗಾಗಿ ಸರ್ಕಾರದಿಂದ ಹಾಗೂ ಹಣಕಾಸು ಸಂಸ್ಥೆಗಳಿಂದ ಪಡೆಯಲಾದ ಸಾಲ, ಅದರ ಮೇಲಿನ ಬಡ್ಡಿ ಮತ್ತು ಮರುಪಾವತಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದು.